## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚಿಂತಾಮಣಿ.

## ಸಿ.ಸಿ.ನಂ.411/2017

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ನವೀನ್ ಕುಮಾರ್** | | |
| **ಗಂಡಃತಂದೆಃಹೆಸರು** | **ನರಸಿಂಹಪ್ಪ** | **ಪಿಡಬ್ಲೂಃ** | 2 |
| **ವಯಸ್ಸು** | **37 ವರ್ಷ** | **ಸಿಡಬ್ಲೂಃ** | 3 |
| **ಉದ್ಯೋಗಃ** | **ಖಾಸಗಿ ಕೆಲಸ** | | |
| **ವಾಸ ಸ್ಥಳಃ** | **ಕೋನಂಪಲ್ಲಿ ಗ್ರಾಮ** | | |

**ದಿನಾಂಕ 05-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದಃ-**

ಸಾಕ್ಷಿಗೆ ನಿಪಿ 1 ಅನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಬಿ ) ಎಂದು ಗುರುತಿಸಲಾಯಿತು. ನಿಪಿ 1 ಕ್ಕೆ ಸಹಿಯನ್ನು 6 ವರ್ಷಗಳ ಹಿಂದೆ ಅಬಕಾರಿ ಠಾಣೆಯಲ್ಲಿ ಮಾಡಿರುತ್ತೇನೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ.

ನನ್ನ ಮುಂದೆ ಯಾವುದೆ ಮಹಜರ್ ನ್ನು ಮಾಡಿಲ್ಲ. ನಿ.ಪಿ.1 ರಲ್ಲಿರುವ ಸಂಗತಿಗಳ ಬಗ್ಗೆ ನನಗೆ ಗೊತ್ತಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ. ಆರೋಪಿ ಯನ್ನು ನಾನು ನೋಡಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ ಸ ಅ ರವರಿಂದಃ–**

ದಿಃ 31.12.2016 ರಂದು ಸಂಜೆ 5.30 ಗಂಟೆ ಸಮಯದಲ್ಲಿ ನಾನು ಚಾಂಡ್ರಹಳ್ಳಿ ಗ್ರಾಮದಲ್ಲಿ ಗಸ್ತು ಮಾಡುತ್ತಿದ್ದಾಗ ಬಂದ ಮಾಹಿತಿಯ ಪ್ರಕಾರ ಕೆಎ 40 ಎನ್ 9679 ವಾಹನದಲ್ಲಿ ಕತ್ರಿಗುಪ್ಪೆ ಗ್ರಾಮದ ಬಳಿ ಹೋದಗ ಗ್ರಾಮದಿಂದ ಸುಮಾರು ಅಧರ್ ಕಿ.ಮೀ. ಅಂತರದಲ್ಲಿ ಒಬ್ಬ ಅಸಾಮಿ ಟಿವಿಎಸ್ ವಾಹದ ಮುಂಬಾಗದಲ್ಲಿ ಬಿಳಿ ಚೀಲದಲ್ಲಿ ರಟಿಟನ ಬಾಕ್ಸ್ ಅನು ಇಟ್ಟುಟಕೊಂಡು ಬರುತ್ತಿರುವುದನ್ನು ಕಂಡು ಆ ವಾಹನವನ್ನು ಹಿಂಬಾಲಿಸಿಕೊಂಡು ಹೋಗಿ ನಿಲ್ಲಿಸಿದಾಗ, ಆಸಾಮಿಗೆ ಚೀಲದಲ್ಲಿದ್ದ ವಸ್ತುಗಳ ಬಗ್ಗೆ ಕೇಳಿದಾಗ ಮದ್ಯದ ಪೆಟ್ಟಿ ಗೆಗಳು ಎಂದು ಹೇಳಿರುತ್ತಾನೆ. ಸದರಿ ವಾಹನ ಮತ್ತು ಮದ್ಯ ವನು ತಪಾಸಣೆ ಮಾಡಲಾಗಿ ಸ್ಥಳದಲ್ಲಿ ಸಾರ್ವಜನಿಕರನ್ನು ಕೇಳಲಾಗಿ ಪಂಚರಾಗಿ ಬರಲು ನಿರಾಕರಿಸಿರುತ್ತಾರೆ. ಆದ್ದರಿಂದ ಇಲಾಖಾ ಸಿಬ್ಬಂದಿಯ್ನನ್ನು ಪಂಚರನ್ನಾಗಿ ಬರ ಮಾಡಿಕೊಂಡು ಶೋದನಾ ವಾರೆಂಟ್ ತಯಾರಿಸಿ ಚೀಲವನ್ನು ಶೋದಿಸಲಾಗಿ, ಅದರಲ್ಲಿ 3 ರಟ್ಟಿನ ಪೆಟ್ಟಿಗಳು ಇದ್ದು 2 ರಟ್ಟಿನ ಪೆಟ್ಟಿಗೆಯಲ್ಲಿ 90 ಮಿಲಿಯ ಹೈ ವಾರ್ಡ್ಸ ಚೀಯರ್ಸ್ ವಿಸ್ಕಿ ಒಂದೊಂದುರಟ್ಟಿನ ಪೆಟ್ಟಿಗೆಯಲ್ಲಿ 96 ಪ್ಯಾಕೆಟ್ ಗಳು ಇದ್ದು ಒಟ್ಟು 192 ಇರುತ್ತವೆ. ಮತ್ತೊಂದು ರಟ್ಟಿನ ಪೆಟ್ಟಿಗೆಯಲ್ಲಿ 90 ಎಂ.ಎಲ್ ನ ಹೈ ವಾರ್ಡ್ಸ ಚೀಯರ್ಸ್ ವಿಸ್ಕಿ ಒಂದೊಂದುರಟ್ಟಿನ ಪೆಟ್ಟಿಗೆಯಲ್ಲಿ 76 ಪ್ಯಾಕೆಟ್ ಗಳು ಇರುತ್ತವೆ ಹಾಗೂ 180 ಮಿಲಿಯ 10 ಓಲ್ಡ್ ಟಾವೆರಿನ್ ವಿಸ್ಕಿ 10 ಪ್ಯಾಕೆಟ್ಗಳು ಇದ್ದು ಕಂಡುಬರುತ್ತದೆ ಎಂದರೆ ಸರಿಯಲ್ಲ. ಆಸಾಮಿಗೆ ಪರವಾನಿಗೆ ಇದೆಯಾ ಎಂದು ಕೇಳಲಾಗಿ ಇಲ್ಲ ಎಂದು ನುಡಿಯುತ್ತಾನೆ ಎಂದರೆ ಸರಿಯಲ್ಲ.

ಆಸಾಮಿಯ ಹೆಸರು ನಾಗರಾಜ್ ಬಿನ್ ಮುನಿನಾರಾಯಣ ಎಂದು ನುಡಿದಿರುತ್ತಾರೆ ಎಂದರೆ ಸರಿಯಲ್ಲ. ನಂತರ 90 ಎಂಎಲ್ ನ 26 ಪ್ಯಾಕೆಟ್ ಗಳು ಮತ್ತು 180 ಎಂ ಎಲ್ ನ 5 ಪ್ಯಾಕೆಟ್ ಗಳನ್ನು ಎಫ್ ಎಸ್ ಎಲ್ ಪರೀಕ್ಷೆಗೆ ತೆಗೆದುಕೊಂಡು ಅವುಗಳಿಗೆ ಬಿಳಿ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಇಲಾಖಾ ಸೀಲಿನಿಂದ ಸೀಲು ಮಾಡಿದರು ಎಂದರೆ ಸರಿಯಲ್ಲ. ಅವುಗಳನ್ನು 6.00-06.45 ಸಂಜೆ ನಮ್ಮ ಸಮಕ್ಷಮ ಅಮಾನತ್ತು ಪಡಿಸಿಕೊಂಡು ಹಾಗೂ ಆರೋಪಿಯನ್ನು ವಶಕ್ಕೆ ಪಡೆದರು ಎಂದರೆ ಸರಿಯಲ್ಲ.

ಸದರಿ ವಿಚಾರವಾಗಿ ನಾನು ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದಿರುವುದರಿಂದ ಸಾಕ್ಷಿಯು ಪೋಲಿಸರಿಗೆ ನೀಡಿದ ಮರುಹೇಳಿಕೆಯನ್ನು ನಿ.ಪಿ.3 ಎಂದು ಗುರುತಿಸಲಾಯಿತು.

ಆರೋಪಿತಯೊಂದಿಗೆ ರಾಜಿ ಮಾಡಿಕೊಂಡಿದ್ದಕೋಸ್ಕರ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀಸವಾಲುಃ ಶ್ರೀ.ಎಂ. ಆರ್ ಆರೋಪಿ ಪರ ವಕೀಲರಿಂದಃ- ಇಲ್ಲ.**

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.